(೧೭) ಬಳ್ಳಾರಿ ನಗರ ಸುತ್ತಮುತ್ತಲು ಇರತಕ್ಕ ಕೊಳಚೆ ಪ್ರದೇಶಗಳ ಬಗ್ಗೆ

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೆ, ಬಳ್ಳಾರಿ ನಗರ ಸುತ್ತು ಮುತ್ತಲ ಕೊಳಚೆ ಪ್ರದೇಶಗಳನ್ನು ಕೊಳಚೆ ಪ್ರದೇಶಗಳೆಂದು ಘೋಷಿಸಿಲ್ಲ. ಮುಖ್ಯವಾಗಿ ಮಹಾನಂದಿ ಕೊಟ್ಟ ಮತ್ತು ಇತರ ಕೊಳಚೆ ಪ್ರದೇಶಗಳಲ್ಲಿ ಸಾರ್ವಜನಿಕ ಪ್ರಾಮುಖ್ಯವಾದ ಯಾವ ಒಂದು ಸವಲತ್ತನ್ನೂ ಒದಗಿಸಿಲ್ಲ. ಈಗ್ಗೆ ಒಂದು ವರ್ಷಕ್ಕೂ ಮೇಲ್ಪಟ್ಟು ಆ ಸ್ಥಳ ಜನ ಹೋರಾಟ ನಡೆಸುತ್ತಿದ್ದಾರೆ. ಇದೇ ಪರಿಸ್ಥಿತಿ ಬಳ್ಳಾರಿ ಸುತ್ತಮುತ್ತಲ ಕೊಳಚೆ ಪ್ರದೇಶಗಳಾಗಿವೆ. ರಾಯಚೂರು ನಗರ ಸುತ್ತಮುತ್ತಲ ಪ್ರದೇಶಗಳಲ್ಲಿ ಕೂಡ ಈ ಒಂದು ಗಂಭೀರ ಪರಿಸ್ಥಿತಿ ಇದೆ. ಆದುದರಿಂದ ಸರ್ಕಾರ ಈ ಕೊಳಚೆ ಪ್ರದೇಶಗಳನ್ನು ಕೊಳಚೆ ಪ್ರದೇಶಗಳೆಂದು ಘೋಷಿಸಿ ಅಲ್ಲಿನ ಸಾರ್ವಜನಿಕರಿಗೆ ನೀರು, ಬೆಳಕು, ರಸ್ತೆ, ಮತ್ತು ವಸತಿ ಸೌಕರ್ಯಗಳನ್ನು ಒದಗಿಸಿ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಹಾಗೂ ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷಣಿಯವರೆ ಬಳ್ಳಾರಿ ನಗರದ ಸುತ್ತಮುತ್ತಲೂ ಇರುವ ೨೦ ಕೊಳಚೆ ಪ್ರದೇಶಗಳ ಪೈಕಿ ೧೬ ಕೊಳಚೆ ಪ್ರದೇಶಗಳನ್ನು ಕರ್ನಾಟಕ ಕೊಳಚೆ ಪ್ರದೇಶ (ಅಭಿವೃದ್ಧಿ ಮತ್ತು ನಿರ್ಮೂಲನಾ) ೧೯೭೩ರ ಅಧಿನಿಯಮ ೩ರ ಪ್ರಕಾರ ಅಂತಿಮವಾಗಿ ಘೋಷಿತವಾಗಿರುತ್ತದೆ. ಉಳಿದ ೪ ಕೊಳಚೆ ಪ್ರದೇಶಗಳು ಕರ್ನಾಟಕ ಕೊಳಚೆ ಪ್ರದೇಶ (ಅಭಿವೃದ್ಧಿ ಮತ್ತು ನಿರ್ಮೂಲನಾ) ೧೯೭೩ರ ಅಧಿನಿಯಮ ೩ರ ಪ್ರಿಲಿಮಿನರಿಯಂತೆ ಘೋಷಿತವಾಗಿದೆ. ಕರ್ನಾಟಕ ಕೊಳಚೆ ಪ್ರದೇಶ (ಅಭಿವೃದ್ಧಿ ಮತ್ತು ನಿರ್ಮೂಲನಾ) ೧೯೭೩ ಅಧಿನಿಯಮ ೩ರಂತೆ ಅಂತಿಮವಾಗಿ ಘೋಷಿತವಾಗಿರುವ ೧೨ ಕೊಳಚೆ ಪ್ರದೇಶಗಳಿಗೆ ಮೂಲ ಭೂತವಾದ ಸೌಲಭ್ಯಗಳನ್ನು ಒದಗಿಸಲಾಗಿದೆ. ಉಳಿದ ೪ ಕೊಳಚೆ ಪ್ರದೇಶಗಳು ಅಧಿನಿಯಮ ೩ರ ಪ್ರಕಾರ ಅಂತಿಮವಾಗಿ ಘೋಷಿತವಾದಮೇಲೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗುವುದು.

ಮಹಾನಂದಿ ಕೊಟ್ಟಂ ಕೊಳಚೆ ಪ್ರದೇಶವು, ಕರ್ನಾಟಕ ಕೊಳಚೆ ಪ್ರದೇಶ (ಅಭಿವೃದ್ಧಿ ಮತ್ತು ನಿರ್ಮೂಲನಾ) ೧೯೭೩ರ ಅಧಿನಿಯಮ ೩ರ ಪ್ರಕಾರ ಅಂತಿಮವಾಗಿ ಘೋಷಿತವಾಗಿಲ್ಲ ಈ ಪ್ರದೇಶವು ಖಾಸಗಿಯವರ ಭೂಮಾಲೀಕತ್ವದಲ್ಲಿದೆ. ಈ ಬಗ್ಗೆ ಮಹಾನಂದಿ ಕೊಟ್ಟಂ ಪ್ರದೇಶದ ನಿವಾಸಿಗಳು ಸದರೀ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಘೋಷಿಸಲು ಕೇಳಿಕೊಂಡಿದ್ದಾರೆ. ಈ ಬಗ್ಗೆ ಮಾನ್ಯ ಸದಸ್ಯರಾದ ಆರ್. ವೆಂಕಟರಾಮಯ್ಯನವರು ಮಾರ್ಚ್ ೧೯೮೬ರಲ್ಲಿ ಚುಕ್ಕೆ ಗುರುತಿನ ಪ್ರಶ್ನೆ ಕೇಳಿರುತ್ತಾರೆ.

ಬಳ್ಳಾರಿ ಮತ್ತು ಸುತ್ತಮುತ್ತಲೂ ಇರುವ ಕೊಳಚೆ ಪ್ರದೇಶಗಳು ಕರ್ನಾಟಕ ಕೊಳಚೆ ಪ್ರದೇಶ (ಅಭಿವೃದ್ಧಿ ಮತ್ತು ನಿರ್ಮೂಲನಾ) ೧೯೭೩ರ ಅಧಿನಿಯಮ ೩ರ ಪ್ರಕಾರ ಅಂತಿಮವಾಗಿ ಘೋಷಿತವಾದಮೇಲೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು.

ರಾಯಚೂರು ಸುತ್ತಮುತ್ತಲ ಪ್ರದೇಶದಲ್ಲಿ ೧೮ ಕೊಳಚೆ ಪ್ರದೇಶಗಳ ಪೈಕಿ ೧೫ ಕೊಳಚೆ ಪ್ರದೇಶಗಳನ್ನು ಕರ್ನಾಟಕ ಕೊಳಚೆ ಪ್ರದೇಶ (ಅಭಿವೃದ್ಧಿ ಮತ್ತು ನಿರ್ಮೂಲನಾ) ೧೯೭೩ರ ಅಧಿನಿಯಮ ೩ರ ಪ್ರಕಾರ ಅಂತಿಮವಾಗಿ ಘೋಷಿತವಾಗಿರುತ್ತದೆ. ಉಳಿದ ೩ ಕೊಳಚೆ ಪ್ರದೇಶಗಳು ಕರ್ನಾಟಕ ಕೊಳಚೆ ಪ್ರದೇಶ (ಅಭಿವೃದ್ಧಿ ಮತ್ತು ನಿರ್ಮೂಲನಾ) ೧೯೭೩ರ ಅಧಿನಿಯಮ ೩ರ ಪ್ರಿಲಿಮಿನರಿ ನೋಟಿಫಿಕೇಷನ್ ಆಗಿರುತ್ತದೆ. ಕರ್ನಾಟಕ ಕೊಳಚೆ ಪ್ರದೇಶ (ಅಭಿವೃದ್ಧಿ ಮತ್ತು ನಿರ್ಮೂಲನಾ) ೧೯೭೩ರ ಅಧಿನಿಯಮ ೩ರ ಪ್ರಕಾರ ಅಂತಿಮವಾಗಿ ಘೋಷಿತವಾಗಿರುವ ೮ ಕೊಳಚೆ ಪ್ರದೇಶಗಳಿಗೆ ಮೂಲಭೂತ ಸೌಕರ್ಯಗಳಾದ ನೀರು, ರಸ್ತೆ ಮತ್ತು ಇತರ ಸೌಕರ್ಯಗಳನ್ನು ಒದಗಿಸಿದೆ. ರಾಯಚೂರಿನ ಮಟಮಾರಿ ರಸ್ತೆಯಂ ಹತ್ತಿರ ೧೮೬ ಮನೆಗಳನ್ನು ಕೊಳಚೆ ನಿವಾಸಿಗಳಿಗೆ ಕಟ್ಟಿಸಲಾಗಿದೆ ಈ ಮನೆಗಳ ಮೇಲ್ಛಾವಣಿ ಕೆಲಸ ಮುಗಿದ ನಂತರ ಕೊಳಚೆ ಪ್ರದೇಶದ ನಿವಾಸಿಗಳಿಗೆ ಮನೆಗಳನ್ನು ಹಂಚಲಾಗುವುದು.